ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಃದಃನ್ಯಾಃದಂ.,ರವರು, ಕಡೂರು

Crl. Misc. No.303/2023. PW 1.

ದಿನಾಂಕಃ**07.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು

<u>ಪಾಟೀ ಸವಾಲುಃ</u>- ಎದುರುದಾರರ ಪರ ಶ್ರೀ ಕೆ ಆರ್ ಯು ವಕೀಲರಿಂದಃ-

ನನ್ನ ತಂದೆಗೆ 5 ಜನ ಹೆಣ್ಣು ಮಕ್ಕಳು, ನಾನು ಕೊನೆಯ ಮಗಳು. ನನಗೆ ಇಬ್ಬರು ಮಕ್ಕಳು. 2 ನೇ ಅರ್ಜಿದಾರ ನನ್ನ ಸಣ್ಣ ಮಗು. ಮೊದಲನೇ ಮಗು ಗಂಡು ಮಗು. ನನ್ನ ಮದುವೆಯು ನಮ್ಮ ಊರಿನಲ್ಲಿ ಆಗಿರುತ್ತದೆ. ಮದುವೆಯ ಕಾಲದಲ್ಲಿ ನನ್ನ ಗಂಡನಿಗೆ ನನ್ನ ತವರಿನಿಂದ ಚಿನ್ನ ನೀಡಿದ್ದಾರೆ ಎಂದು ಹೇಳಿದ್ದು ಆ ಬಗ್ಗೆ ರಶೀದಿ/ಬಿಲ್ ಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ. ನನ್ನ ಗಂಡು ಮಗನನ್ನು ಎದುರುದಾರರು ಇಟ್ಟುಕೊಂಡಿದ್ದಾರೆ. ನನ್ನ ಗಂಡ ಮರಕೆಲಸ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಎದುರುದಾರರಿಗೆ ಕೃಷಿಯಿಂದ ಆದಾಯವಿದೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ. ಎದುರುದಾರರ ತಾಯಿಯ ಹೆಸರಿಗೆ ಇರುವ ಜಮೀನು ಅವರಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ, ಪಹಣಿ ಹಾಜರುಪಡಿಸಿರುತ್ತೇನೆ. ಆರ್ ಸಿ ಸಿ ಮನೆಯು ಎದುರುದಾರರ ತಂದೆಗೆ ಹೇಗೆ ಬಂದಿರುತ್ತದೆ ಎಂದು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಎದುರುದಾರರ ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ತಂದೆಗೆ 5 ಜನ ಹೆಣ್ಣು ಮಕ್ಕಳು ಇದ್ದದ್ದರಿಂದ ಮತ್ತು ಬಡತನದ ಕುಟುಂಬವಾಗಿದ್ದರಿಂದ ಎದುರುದಾರರೇ ಮದುವೆಯ ಖರ್ಚು ಮಾಡಿಕೊಂಡು ನನ್ನನ್ನು ಮದುವೆಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ.

ನಾನು ಚುನಾವಣೆಗೆ ಸ್ಪರ್ದಿಸಿದ್ದಾಗ ನನ್ನ ತವರಿನವರು ಆಸ್ತಿ ಮಾರಾಟ ಮಾಡಿ ಖರ್ಚು ಮಾಡಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ಅರ್ಜಿಯನ್ನು ನಾನು ಜೀವನಾಂಶ ಕೋರಿ ಸಲ್ಲಿಸಿರುತ್ತೇನೆ.

ನನ್ನ ತಾಯಿಯ ಹೆಸರು ಜಯಾ ಬಾಯಿ. ಈಗ ನೋಡುತ್ತಿರುವ ಎಂ ಆರ್ ನನ್ನ ತಾಯಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು

ಗುರುತಿಸಿದ್ದರಿಂದ ಅದನ್ನು ನಿಆರ್-1 ಎಂದು ಗುರುತಿಸಲಾಯಿತು. ಎದುರುದಾರರು ಮತ್ತು ನನ್ನ ಅತ್ತೆ-ಮಾವ ಯಾವುದೇ ರೀತಿಯಾಗಿ ಹಿಂಸೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಸ್ವತಃ ಎದುರುದಾರರ ಜೊತೆ ಇರಲು ಇಷ್ಟವಾಗದೇ ಏಕಾಏಕಿ ತವರು ಮನೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ಹಿಂಸೆ ನೀಡಿದ್ದಾರೆ ಎಂಬ ಸಂಬಂಧವಾಗಿ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಬಗ್ಗೆ ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರುಪಡಿಸಿರುತ್ತೇನೆ. ಎದುರುದಾರರು ಹಿಂಸೆ ನೀಡಿದ್ದಾರೆ ಎಂಬ ಸಂಬಂಧವಾಗಿ ನಾನು ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ.

ನಾನು ಈ ಅರ್ಜಿಯಲ್ಲಿ ಕೇಳಿರುವಂತೆ ಜೀವನಾಂಶ ನೀಡುವಷ್ಟು ಆರ್ಥಿಕ ಚೈತನ್ಯ ಎದುರುದಾರರಿಗೆ ಇಲ್ಲ ಎಂದರೆ ಸರಿಯಲ್ಲ. ನಾನು ಎಸ್ ಎಸ್ ಎಲ್ ಸಿ ಓದಿರುತ್ತೇನೆ. ನಾನು ಗ್ರಾಮ ಪಂಚಾಯಿತಿಯ ಚುನಾವಣೆಗೆ ಸ್ಪರ್ಧಿಸಿದ್ದೆ ಎಂದರೆ ಸರಿ, ಆದರೆ ನಾನು ಗೆದ್ದಿರುವುದಿಲ್ಲ. ನಾನು ನನ್ನ ಜೀವನ ನಿರ್ವಹಣೆ ಮಾಡಲು ಕೆಲಸಕ್ಕೆ ಹೋಗಿ ಜೀವನ ನಡೆಸಲು ಶಕ್ತಳಾಗಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ನಾನು ಅವರ ಜೊತೆ ಹೊದರೆ ಈಗಲು ಸಹಃ ಅವರು ನನ್ನನ್ನು ನೋಡಿಕೊಳ್ಳಲು ಸಿದ್ದರಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು 2 ನೇ ವಿವಾಹ ಆಗಿರುತ್ತಾರೆ. ನಾನು ಈ ಅರ್ಜಿಯ ಮೂಲಕ ಅನ್ಯತಃ ಲಾಭ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.